ವಿದ್ಯುತ್ ಉತ್ಪಾದನೆ

1830 (445); ಶ್ರೀ ಕೋಳಿವಾಡ ಕೆ. ಬಿ. (ರಾಣೇಬೆನ್ನೂರು)

ಅ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಎಷ್ಟು ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ;

ಆ) ರಾಜ್ಯದಲ್ಲಿ ಒಟ್ಟು ವಿದ್ಯುತ್ ಬಳಕೆ ಪ್ರಮಾಣ ಎಷ್ಟು; ವಿದ್ಯುತ್ ಕೊರತೆ ಎಷ್ಟು ಯೂನಿಟ್ ಆಗುತ್ತದೆ; ಈ ಕೊರತೆಯನ್ನು ಸರಿದೂಗಿಸಲು ಕೈಗೊಂಡ ಕ್ರಮಗಳೇನು;

ಇ) ಕಳೆದ 2 ವರ್ಷಗಳಿಂದ ಎಷ್ಟು ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ;

ಈ) ರೈತರ ಪಂಪ್‌ಸೆಟ್‌ಗಳಿಗೆ ದಿನಕ್ಕೆ ಅಡೆತಡೆ ರಹಿತ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆಯೇ; ವಿದ್ಯುತ್ ಸರಬರಾಜು ಮಾಡುವ ಅವಧಿ ಯಾವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ರಾಜ್ಯದಲ್ಲಿ ದಿನಾಂಕ: 06.02.2015 ರಂದು ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್‌ನ ಪ್ರಮಾಣವು 191.01 ದಶಲಕ್ಷ ಯೂನಿಟ್‌ಗಳು.

ಆ) ಪ್ರಸ್ತುತ, ರಾಜ್ಯದಲ್ಲಿ ಪ್ರತಿದಿನ ಅವಶ್ಯಕತೆಯಿರುವ ನಿರ್ಬಂಧಿತ ವಿದ್ಯುತ್ತಿನ ಪ್ರಮಾಣವು ಸುಮಾರು 200.0 ದಶಲಕ್ಷ ಯೂನಿಟ್ಟುಗಳು.

ಕೊರತೆ ಇರುವ ವಿದ್ಯುತ್ತನ್ನು ಸ್ವಲ್ಪ ಮಟ್ಟಿಗೆ ಸರಿದೂಗಿಸಲು ಅಲ್ಪಾವಧಿ ಹಾಗೂ ಮಧ್ಯಮಾವಧಿ ಆಧಾರದಲ್ಲಿ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ.

ಇ) ಕಳೆದ 2 ವರ್ಷಗಳಿಂದ ರಾಜ್ಯಕ್ಕೆ ಲಭ್ಯವಾದ ಒಟ್ಟು ವಿದ್ಯುತ್‌ನ ಪ್ರಮಾಣದ ವಿವರಗಳು ಈ ಕೆಳಕಂಡಂತಿವೆ:–

(ದಶಲಕ್ಷ ಯೂನಿಟ್‌ಗಳಲ್ಲಿ)

ಕ್ರ. ಸಂ.	ವರ್ಷ	ಲಭ್ಯವಾದ ವಿದ್ಯುತ್ ಪ್ರಮಾಣ
1	2012–13	57,476
2	2013–14	59,024

ಈ) ವಿದ್ಯುತ್ ಲಭ್ಯತೆಯ ಅನುಗುಣವಾಗಿ ಗ್ರಾಮೀಣ ಪ್ರದೇಶಗಳಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ದಿನಂಪ್ರತಿ ಹಗಲಿನ ವೇಳೆ 4 ಗಂಟೆ ಮತ್ತು ರಾತ್ರಿ ವೇಳೆ 3 ಗಂಟೆ ಒಟ್ಟು 7 ಗಂಟೆಗಳ ಕಾಲ 3 ಫೇಸ್ ಹಾಗೂ ಸಂಜೆ 6 ರಿಂದ ಬೆಳಿಗ್ಗೆ 6 ರವರೆಗೆ ಸಿಂಗಲ್ ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ.

ಆದಾಗ್ಯೂ, ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಅಥವಾ ವಿದ್ಯುತ್ ಪ್ರಸರಣ ಮಾರ್ಗಗಳಲ್ಲಿ ತಾಂತ್ರಿಕ ತೊಂದರೆಯುಂಟಾದಾಗ ಮಾತ್ರ ವಿದ್ಯುತ್ ಜಾಲದ ಸುರಕ್ಷತಾ ದೃಷ್ಟಿಯಿಂದ ತಾತ್ಕಾಲಿಕವಾಗಿ ಅಗತ್ಯಕ್ಕೆ ತಕ್ಕಂತೆ ಸ್ವಲ್ಪ ಪ್ರಮಾಣದ ವಿದ್ಯುತ್ ಕಡಿತ ಮಾಡಬೇಕಾಗುತ್ತದೆ.

ರೈತರು ಬೆಳೆಯುವ ಬೀಜೋತ್ಪನ್ನಗಳನ್ನು ಖರೀದಿಸುವುದು

1831 (1793); ಶ್ರೀ ಕೋನರೆಡ್ಡಿ ಎನ್. ಎಚ್.

ಅ) ರಾಜ್ಯದಲ್ಲಿ ರೈತರು ಉತ್ಪಾದಿಸಿದ ಬೀಜಗಳನ್ನು ಸರ್ಕಾರವು ಮಿತಿಗೊಳಿಸಿ ಖರೀದಿಸುತ್ತಿದ್ದು ಹಾಗೂ ಖಾಸಗಿ ಕಂಪನಿಗಳಿಂದ ಹೇರಳವಾಗಿ ಖರೀದಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೈತರು ಬೆಳೆಯುವ ಬೀಜೋತ್ಪಾದನೆಗಳನ್ನು ಖರೀದಿಸಿ ರೈತರಿಗೆ ಪ್ರೋತ್ಸಾಹಿಸಲು ಇಲಾಖೆಗೆ ಇರುವ ತೊಂದರೆ ಏನು ಹಾಗೂ ರೈತರು ಬೆಳೆಯುವ ಬೀಜೋತ್ಪನ್ನಗಳಿಗೆ ಮಿತಿ ನಿಗದಿಪಡಿಸಲು ಕಾರಣವೇನು;